6) ವಿತ್ತೀಯ ಕಾರ್ಯಕಲಾಪಗಳು:

2007–08 ನೇ ಸಾಲಿನ ಅನುದಾನ ಬೇಡಿಕೆಗಳ ಮಂಡನೆ

ಬೇಡಿಕೆ ಸಂಖ್ಯೆ:1 ಕೃಷಿ ಮತ್ತು ತೋಟಗಾರಿಕೆ

ಶ್ರೀ ಬಂಡೆಪ್ಪ ಕಾಶೆಂಪೂರ್(ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2008 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಕೃಷಿ ಮತ್ತು ತೋಟಗಾರಿಕೆ ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಬೇಡಿಕೆ ಸಂಖ್ಯೆ:2, ಪಶುಸಂಗೋಪನೆ ಮತ್ತು ಮೀನುಗಾರಿಕೆ.

ಶ್ರೀ ರೇವು ನಾಯಕ್ ಬೆಳಮಗಿ: (ಪಶು ಸಂಗೋಪನಾ ಸಚಿವರು): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31..3.2008 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ "ಪಶು ಸಂಗೋಪನೆ ಮತ್ತು ಮೀನುಗಾರಿಕೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವಖಾತೆಯಲ್ಲಿ ಹಾಗೂ ಬಂಡವಾಳ ಕಾತೆಯಲ್ಲಿ ಮಂಜೂರು ಮಾಡಿದ ಮೊಬಲಗೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಬೇಡಿಕೆ ಸಂಖ್ಯೆ:8 ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ

ಶ್ರೀ ಬಿ.ಎಸ್‌ಯಡಿಯೂರಪ್ಪ(ಹಣಕಾಸು ಸಚಿವರು) (ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2008 ರಮದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಬರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಶ್ರೀ ದರ್ಮಸಿಂಗ್: ಅಧ್ಯಕ್ಷರೆ, ಬೇಡಿಕೆಗಳು ಬಂದಾಗ ಸಂಬಂಧಪಟ್ಟ ಮಂತ್ರಿಗಳೇ ಮಂಡಿಸಬೇಕು, ಅವರ ಪರವಾಗಿ ಬೇರೆ ಮಂತ್ರಿಗಳು ಮಂಡಿಸತಕ್ಕದ್ದಲ್ಲ.

ಅಧ್ಯಕ್ಷರು: ಏನು ಮಾಡೋಣ. ಕೆಲವು ಮಂತ್ರಿಗಳು ಇಲ್ಲ.

ಬೇಡಿಕೆ ಸಂಖ್ಯೆ :9 – ಸಹಕಾರ

ಶ್ರೀ ಬಿ.ಎಸ್.ಯಡಿಯೂರಪ್ಪ (ಹಣಕಾಸು ಸಚಿವರು) ಸಹಕಾರ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಘನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2008 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಸಹಕಾರಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಬೇಡಿಕೆ ಸಂಖ್ಯೆ :10 – ಸಮಾಜ ಕಲ್ಯಾಣ

ಶ್ರೀ ಬಾಲಚಂದ್ರ ಜಾರಕಿ ಹೊಳಿ (ಸಮಾಜಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2008 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ "ಸಮಾಜ ಕಲ್ಯಾಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಶ್ರೀ ಬಸವರಾಜ ರಾಯ ರೆಡ್ಡಿ: ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು: ರೆಡ್ಡಿಯವರೆ, ಮೊದಲು ಮಂಡನೆಯಾಗಲಿ, ಅನಂತರ ಕೇಳಿ

ಶ್ರೀ ಬಸವರಾಜರಾಯ ರೆಡ್ಡಿ: ನಾನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಕಾರ್ಯದರ್ಶಿಗಳ ಹತ್ತಿರ ಹೋಗಿ, ಈ ವರ್ಷದ performance budget ಮತ್ತು ವಾರ್ಷಿಕ ವರದಿ ಎರಡನ್ನೂ ಕೊಡಿ ಎಂದರೆ ಇನ್ನೂ ಪ್ರಿಂ ಟ್ ಆಗಿಲ್ಲ ಸರ್, ಲೇಟಾಗುತ್ತದೆ ಎಂಬ ಮಾತನ್ನು ನನಗೆ ಹೇಳಿದ್ದಾರೆ.

ಅಧ್ಯಕ್ಷರು: ಅದರ ಬಗ್ಗೆ ಸರ್ಕಾರ ಏನು ಹೇಳುತ್ತದೆ ಎಂಬುದನ್ನು ಅನಂತರ ನೋಡೋಣ. ಮೊದಲು ಬೇಡಿಕೆಗಳ ಮಂಡನೆಯಾಗಲಿ.

ಬೇಡಿಕೆ ಸಂಖ್ಯೆ :11 – ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ

ಶ್ರೀ ಎಚ್.ಕೆ.ಕುಮಾರ ಸ್ವಾಮಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2008 ರಮದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ **"ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ"** ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಬೇಡಿಕೆ ಸಂಖ್ಯೆ :14 – ಕಂದಾಯ

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಇಲಾಖೆಯ ಸಚಿವರು): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2008 ರಮದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ **"ಕಂದಾಯ"ಕ್ಕೆ** ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಬೇಡಿಕೆ ಸಂಖ್ಯೆ :16 – ವಸತಿ

ಶ್ರೀ ಡಿ.ಟಿ.ಜಯಕುಮಾರ್ (ವಸತಿ ಇಲಾಖೆಯ ಸಚಿವರು): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2008 ರಮದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ **"ವಸತಿ"ಗೆ** ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ

ಮೊಬಲಗು ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಬೇಡಿಕೆ ಸಂಖ್ಯೆ :22 – ಆರೋಗ್ಯ ಮತ್ತು ಕುಟುಂಬ ಕಲ್ಯಾಣ

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವರು): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2008 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ **"ಆರೋಗ್ಯ ಮತ್ತು ಕುಟುಂಬ ಕಲ್ಯಾಣ"ಕ್ಕೆ** ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು (ಲೇಖಾನು ದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಬೇಡಿಕೆ ಸಂಖ್ಯೆ :13 – ಆಹಾರ ಮತ್ತು ನಾಗರೀಕ ಸರಬರಾಜು

ಶ್ರೀ ಬಿ.ಎಸ್.ಯಡಿಯೂರಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2008 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ **"ಆಹಾರ ಮತ್ತು ನಾಗರೀಕ ಸರಬರಾಜಿಗೆ"** ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು (ಲೇಖಾನು ದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಬೇಡಿಕೆ ಸಂಖ್ಯೆ :18 – ವಾಣಿಜ್ಯ ಮತ್ತು ಕೈಗಾರಿಕೆ

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2008 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ **"ವಾಣಿಜ್ಯ ಮತ್ತು ಕೈಗಾರಿಕೆಗೆ"** ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು (ಲೇಖಾನು ದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಬೇಡಿಕೆ ಸಂಖ್ಯೆ :26 – ಯೋಜನೆ, ಸಾಂಖಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ

ಶ್ರೀ ರಾಮಚಂದ್ರಗೌಡ (ಯೋಜನೆ, ಸಾಂಖಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2008 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ **"ಯೋಜನೆ, ಸಾಂಖಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಕೆ"** ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು (ಲೇಖಾನು ದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಬೇಡಿಕೆ ಸಂಖ್ಯೆ :27 – ಕಾನೂನು

ಶ್ರೀ ಎಂ.ಪಿ.ಪ್ರಕಾಶ್ (ಕಾನೂನು ಸಚಿವರು): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2008 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ **"ಕಾನೂನು ಗೆ"** ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಬೇಡಿಕೆ ಸಂಖ್ಯೆ :28 – ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ

ಶ್ರೀ ಎಂ.ಪಿ.ಪ್ರಕಾಶ್ (ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2008 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ **"ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಗೆ"** ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಬೇಡಿಕೆ ಸಂಖ್ಯೆ :24,20 – ಇಂಧನ ಮತ್ತು ಲೋಕೋಪಯೋಗಿ

ಶ್ರೀ ಬಿ.ಎಸ್.ಯಡಿಯೂರಪ್ಪ (ಉಪಮುಖ್ಯಮಂತ್ರಿಯವರು) (ಇಂಧನ ಮತ್ತು ಲೋಕೋಪಯೋಗಿ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2008 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ **"ಇಂಧನ ಮತ್ತು ಲೋಕೋಪಯೋಗಿ ಗೆ"**

ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಬೇಡಿಕೆ ಸಂಖ್ಯೆ :21 – ಜಲ ಸಂಪನ್ಮೂಲ

ಶ್ರೀ ಬಿ.ಎಸ್.ಯಡಿಯೂರಪ್ಪ (ಉಪಮುಖ್ಯಮಂತ್ರಿಯವರು) (ಜಲ ಸಂಪನ್ಮೂಲ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2008 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ **"ಜಲ ಸಂಪನ್ಮೂಲ ಕ್ಕೆ"** ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಬೇಡಿಕೆ ಸಂಖ್ಯೆ :17 – ಶಿಕ್ಷಣ

ಶ್ರೀ ಬಿ.ಎಸ್.ಯಡಿಯೂರಪ್ಪ (ಉಪಮುಖ್ಯಮಂತ್ರಿಯವರು) (ಶಿಕ್ಷಣ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2008 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ **"ಶಿಕ್ಷಣ ಕ್ಕೆ"** ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಬೇಡಿಕೆ ಸಂಖ್ಯೆ :23– ಕಾರ್ಮಿಕ

ಶ್ರೀ ಬಿ.ಎಸ್.ಯಡಿಯೂರಪ್ಪ (ಉಪಮುಖ್ಯಮಂತ್ರಿಯವರು) (PÀ«ÄðPÀ¸À¯ÁgÀ¸ÀÄAV) ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2008 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ **"ಕಾರ್ಮಿಕ ಕ್ಕೆ"** ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿದ್ದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಬೇಡಿಕೆ ಸಂಖ್ಯೆ :6– ಮೂಲಭೂತ ಸೌಕರ್ಯಗಳು

ಶ್ರೀ ಬಿ.ಎಸ್.ಯಡಿಯೂರಪ್ಪ (ಉಪಮುಖ್ಯಮಂತ್ರಿಯವರು) (ಪ್ರವಾಸೋದ್ಯಮ ಹಾಗೂ ಮೂಲಭೂತ ಸೌಕರ್ಯಗಳ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2008 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ **"ಮೂಲಭೂತ ಸೌಕರ್ಯ ಕ್ಕೆ"** ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಬೇಡಿಕೆ ಸಂಖ್ಯೆ :25– ಕನ್ನಡ ಮತ್ತು ಸಂಸ್ಕೃತಿ

ಶ್ರೀ ಮಹದೇವ ಪ್ರಸಾದ್ (ಕನ್ನಡ ಮತ್ತು ಸಂಸ್ಕೃತಿಸಚಿವರು) ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2008 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ **"ಕನ್ನಡ ಮತ್ತು ಸಂಸ್ಕೃತಿ ಗೆ"** ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಬೇಡಿಕೆ ಸಂಖ್ಯೆ :4,5,12,15,19– ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಒಳಾಡಳಿತ ಮತ್ತು ಸಾರಿಗೆ, ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು, ಮಾಹಿತಿ ತಂತ್ರಜ್ಞಾನ, ನಗರಾಭಿವೃದ್ಧಿ

ಶ್ರೀ ಹೆಚ್.ಡಿ.ಕುಮಾರ ಸ್ವಾಮಿ (ಮುಖ್ಯಮಂತ್ರಿಯವರು): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2008 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ **"ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಒಳಾಡಳಿತ ಮತ್ತು ಸಾರಿಗೆ, ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು, ಮಾಹಿತಿ ತಂತ್ರಜ್ಞಾನ, ನಗರಾಭಿವೃದ್ಧಿ ಗೆ"** ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಬೇಡಿಕೆ ಸಂಖ್ಯೆ :3– ಆರ್ಥಿಕ

ಶ್ರೀ ಬಿ.ಎಸ್.ಯಡಿಯೂರಪ್ಪ (ಉಪಮುಖ್ಯಮಂತ್ರಿಯವರು ಹಾಗೂ ಹಣಕಾಸು ಸಚಿವರು) ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2008 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ **"ಆರ್ಥಿಕ ಕ್ಕೆ"** ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಎಲ್ಲಾ ಬೇಡಿಕೆಗಳನ್ನು ಮಂಡಿಸಲಾಗಿದೆ.

ಅಧ್ಯಕ್ಷರು: ಮಾನ್ಯ ಧರ್ಮಸಿಂಗ್(ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ, ಹೋದ ವರ್ಷ ಸಹ ಬೇಡಿಕೆಗಳನ್ನು ಮಂಡಿಸಿದಾಗ performance budget ಕೊಡಲೇ ಬೇಕೆಂದು ಹೇಳಿದ್ದೆವು. ಇವತ್ತು ನಮಗೆ ವಾರ್ಷಿಕ ವರದಿ ಬೇಕು. ತಾವು ಏನು ಪ್ರಗತಿ ಮಾಡಿದ್ದೀರಿ ಅದರ ಬಗ್ಗೆ ಕೊಡಬೇಕು. ಅದನ್ನು ಕೊಡದಿದದ್ರೆ ನಾವು ಯಾವ ರೀತಿಯಾಗಿ ಚರ್ಚೆ ಮಡಲು ಆಗುತ್ತದೆ. ಆದ್ದರಿಂದ ಯಾವ್ಯಾವ ಬೇಡಿಕೆಯ ಮೇಲೆ performance budget ತಯಾರು ಮಡಿದ್ದಿರೋ ಅದನ್ನು ನಮಗೆ ಒದಗಿಸಿ. ಅದನ್ನು ಒದಗಿಸಿದರೆ ಮಾತ್ರ ಅದರ ಬಗ್ಗೆ ಬೆಳಕು ಚೆಲ್ಲಲು ಸಾಧ್ಯವಾಗುತ್ತದೆ. ಹೋದ ಸಲ ಕೂಡ ಇದೇ ರೀತಿಯಾಗಿದೆ. ಈ ಇಲಾಖೆ ಏಕೆ ಇದೆ?

ಶ್ರೀ ಎಂ.ಪಿ.ಪ್ರಕಾಶ್: ಹೋದ ವರ್ಷ performance budget ಇಲ್ಲಿ ಆಯಿತೇ?

ಶ್ರೀ ಎನ್ ಧರ್ಮಸಿಂಗ್: pyou have to give

ಶ್ರೀ ಶರಣಪ್ಪ ರುದ್ರಪ್ಪ ಪಾಟೀಲ: ಸರ್ಕಾರದ ಪ್ರಗತಿ ಬಹಳ ಹಿಂದೆ ಇದೆ. ಆದುದರಿಂದ ಅವರು performance budget ನ್ನು ಕೊಡಲು ಹಿಂಜರಿಯುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರೂ ಹೊರಟು ಹೋದರು.

ಶ್ರೀ ಎನ್ ಧರ್ಮಸಿಂಗ್: ಯಾವ ಬೇಡಿಕೆಯ ಬಗ್ಗೆ performance budget ತಯಾರಾಗಿದೆ ಅದರ ಬಗ್ಗೆ ಮಾತನಾಡುತ್ತೇವೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ನಾವು ಕೊಡುತ್ತಿದ್ದೇವೆ.

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ: ಯಾವ್ಯಾವುದು annual report ಮತ್ತು performance budget ಕೊಟ್ಟಿಲ್ಲ ಎಂಬುದನ್ನು ಹೇಳಿ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಯಾವುದು ಬಂದಿಲ್ಲ ಎಂಬುದನ್ನು ಹೇಳಿ.

(ಗೊಂದಲ)

ಶ್ರೀ ಬಸವರಾಜರಾಯ ರೆಡ್ಡಿ: RDPR ದ್ದು ಬಂದಿಲ್ಲ. ಮಾನ್ಯ ಅಧ್ಯಕ್ಷರೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯದ್ದು ಇನ್ನೂ print ಆಗಿಲ್ಲ. ನಾನು ಇಲಾಖೆಗೆ ಸ್ವತಃ ಹೋಗಿ ಬಂದಿದ್ದೇನೆ.I went to the Secretary

(ಗೊಂದಲ)

ಶ್ರೀ ಎಸ್.ಎಸ್.ಪಾಟೀಲ್: ಇಲ್ಲಿ ಚರ್ಚೆ ಆಗುವುದೇ ಇಲ್ಲ. ಆದ್ದರಿಂದ ದಯವಿಟ್ಟು Subject Committees Constitute ಮಾಡಿಬಿಡಿ. ಅಲ್ಲಿ ಎಲ್ಲವನ್ನೂ ಡಿಸ್ಕಸ್ ಮಾಡಿ, ಅದರ ವರದಿಯನ್ನು ಇಲ್ಲಿ ಇಡೋಣ.....

ಅಧ್ಯಕ್ಷರು: ಬೇಡಿಕೆಗಳ ಮೇಲೆ ಚರ್ಚೆ 3–4 ದಿನಗಳ ಹಿದೆಯೇ ಆಗಬೇಕಾಗಿತ್ತು. ಕೆಲವು ಇಲಾಖೆಗಳದ್ದು ಇಲ್ಲಿ ಮಂಡನೆಯಾಗದೇ ಇರಬಹುದು. ಯಾವ ಇಲಾಖೆಗಳ performance report ಕೊಡ ಲಾಗಿದೆಯೋ ಆ ಇಲಾಖೆಗಳ ಬೇಡಿಕೆಗಳ ಮೇಲಾದರೂ ಒಂದೊಂದಾಗಿ ಚರ್ಚೆಯನ್ನು ಆರಂಭಿಸಬಹುದಲ್ಲವೇ?

(ಗೊಂದಲ)

ತಾವು ಹೇಳುವುದನ್ನು ನಾನು ಒಪ್ಪುತ್ತೇನೆ.

(ಗೊಂದಲ)

ಶ್ರೀ ಧರ್ಮಸಿಂಗ್: ಅನಾವಶ್ಯಕವಾಗಿ ನಾವು ತಕರಾರು ತೆಗೆಯುತ್ತಿಲ್ಲ. ನಾವು ಮಾತನಾಡಲಿಕ್ಕೆ ತಯಾರಾಗಿದ್ದೇವೆ. ಇವತ್ತು ಮಂಡಿಸಲಾಗಿರುವ ಯಾವ್ಯಾವ ಬೇಡಿಕೆಗಳ ಬಗ್ಗೆ annual report ಮತ್ತು performance report ರೆಡಿಯಾಗಿದೆಯೋ ಅವುಗಳನ್ನು ನಮಗೆ ಒದಗಿಸಿಕೊಡಿ. ನಾವು ನಾಳೆಯಿಂದಲೇ ಚರ್ಚೆ ಪ್ರಾರಂಭ ಮಾಡೋಣ. ಇವತ್ತೇ ಬೇಕಾದರೆ, ಇವತ್ತೇ ಚರ್ಚೆ ಪ್ರಾರಂಭ ಮಾಡೋಣ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಸಾಮಾನ್ಯವಾಗಿ ಬೇಡಿಕೆಗಳನ್ನು ಒಂದೊಂದಾಗಿ ಮಂಡಿಸಲಾಗುತ್ತದೆ. ಈಗ ಬೇಡಿಕೆಗಳನ್ನು ಮಂಡಿಸುವಾಗ ಕೆಲವು ಸಚಿವರು ಇದ್ದರು, ಇನ್ನು ಕೆಲವರು ಇರಲಿಲ್ಲ. ಮಂಡಿಸಲಾಗಿರುವ ಬೇಡಿಕೆಗಳಿಗೆ ಸಂಬಂಧ ಪಟ್ಟಂತೆ ಎಲ್ಲಾ ಮಾಹಿತಿಗಳೂ ಮತ್ತು ವಿಚಾರಗಳನ್ನು ಸಾಮಾನ್ಯವಾಗಿ ಒದಗಿಸಲಾಗುತ್ತದೆ. ಆದರೆ ಇವತ್ತು ಅದು ಯಾವುದನ್ನೂ ಒದಗಿಸಿಲ್ಲ. ಎರಡನೆಯದಾಗಿ ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಕುಳಿತಿದ್ದರು. ಮಾನ್ಯ ಮುಖ್ಯ ಮಂತ್ರಿಗಳು ಸದನದಲ್ಲಿ

ಕುಳಿತಿರುವವರೆಗೂ ಮುಂದಿನ ಕುರ್ಚಿಯಲ್ಲಿ ಎಲ್ಲಾ ಅಧಿಕಾರಿಗಳು ಕುಳಿತಿದ್ದರು. ಮಾನ್ಯ ಮುಖ್ಯಮಂತ್ರಿಗಳು ಸದನದಿಂದ ನಿರ್ಗಮಿಸಿದ ತಕ್ಷಣವೇ ಅವರ ಹಿಂದೆಯೇ ಎಲ್ಲಾ ಅಧಿಕಾರಿಗಳೂ ಸಭಾತ್ಯಾಗ ಮಾಡಿದರು. ಮಾನ್ಯ ಪ್ರಕಾಶ್‌ರವರು ಆ ಕಡೆಗೆ ಗಮನ ಹರಿಸಲಿಲ್ಲವೆಂದು ಕಾಣುತ್ತದೆ. ಏನು ಅವತಾರ ಇದು? ಈ ಅಧಿಕಾರಿಗಳಿಗೆ ಈ ಸದನದಲ್ಲಿ ಹೇಳುವವರು ಕೇಳುವವರು ಯಾರೂ ಇಲ್ಲವೆ? ಈ ಅದಿಕಾರಿಗಳಿಗೆ ಏನಾಗಿದೆ? ಇದೇನು ಸಭೆಯೇ? ಇದೆಲ್ಲಾ ಏನು ಹುಡುಗಾಟ. ಈ ಅಧಿಕಾರಿಗಳೇನು ದೊಡ್ಡ ಪಾಳೆಯಗಾರರೇ? ನಮಗೆ ನಾಚಿಕೆಯಾಗುತ್ತಿದೆ, ಈ ಸದನಕ್ಕೆ ಅವಮಾನ ವಾಗುತ್ತಿದೆ. ಯಾವ ಕಾರಣಕ್ಕೋಸ್ಕರ ಅಧಿಕಾರಿಗಳೆಲ್ಲರೂ ಕೂಡ ಹೊರಗೆ ಹೋದರು ಎಂಬುದನ್ನು ಮಾನ್ಯ ಸಂಸದೀಯ ಸಚಿವರು ಹೇಳಬೇಕು.

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಸ್ತಾಪಿಸಿರತಕ್ಕಂಥಹ ಪ್ರಶ್ನೆ ನಿಜವಾಗಿಯೂ ಕೂಡ ಸರಿಯಾದುದು. ಒಂದು ಅರ್ಥಪೂರ್ಣವಾದಂತಹ ಚರ್ಚೆಯನ್ನು ಮಾಡಬೇಕಾದರೆ annual report ಮತ್ತು performance budget ಇರಲೇಬೇಕಾಗುತ್ತದೆ. ತಾವು ಪ್ರಸ್ತಾಪಿಸಿರತಕ್ಕಂಥ ವಿಷಯಗಳು ಯಾವುದೂ ಕೂಡ ತಪ್ಪು ಎಂದು ನಾವು ಭಾವಿಸುವುದಿಲ್ಲ. ಅಷ್ಟರಮಟ್ಟಿಗೆ ಸರ್ಕಾರ ಜವಾಬ್ದಾರಿಯನ್ನು ಹೊರುತ್ತದೆ. ಅದಕ್ಕೆ ವಿಷಾದವನ್ನೂ ಕೂಡ ವ್ಯಕ್ತ ಮಾಡುತ್ತದೆ. ಈಗಾಗಲೇ ಕೆಲವು ಇಲಾಖೆಗಳ ವರದಿ ಒದಗಿಸಿಕೊಟ್ಟಿದ್ದೇವೆ. ಶಿಕ್ಷಣ ಇಲಾಖೆ, ಅಭಿಯೋಗ ಮತ್ತು ಸರ್ಕಾರಿ ವಾಣಿಜ್ಯ ಇಲಾಖೆ, ಕಾರಾಗೃಹ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಇಂಧನ ಇಲಾಖೆ, ಆರ್ಥಿಕ ಇಲಾಖೆ, ಸಾರಿಗೆ ಇಲಾಕೆ, ಕಂದಾಯ ಇಲಾಖೆ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ತಂತ್ರಜ್ಞಾನ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ಯುವಜನ ಸೇವಾ ಇಲಾಖೆ ಸಾರ್ವಜನಿಕ ಉದ್ಯಮಗಳ ಇಲಾಖೆ, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ, ಇಷ್ಟೂ ಇಲಾಖೆಗಳ ಆನ್ಯುಅಲ್ ರಿಪೋರ್ಟ್ ಅನ್ನು ನಾವು ಕಳುಹಿಸಿಲ್ಲ. ಉಳಿದ ಎಲ್ಲಾ ಇಲಾಖೆಗಳಿಗೆ ಸಂಭಂದಿಸಿದಂತೆ ಆನ್ಯುಅಲ್ ರಿಪೋರ್ಟ್‌ಅನ್ನು ನಾವು

ಕಳುಹಿಸಿದ್ದೇವೆ. performance budget ತಯಾರಾಗುತ್ತಿದೆ. ನಾಳೆಗೆ ಅದನ್ನು ಒದಗಿಸಿಕೊಡುತ್ತೇವೆಂದು ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದ್ದಾರೆ. ಸುಮಾರು 28 ಬೇಡಿಕೆಗಳನ್ನು ನಾವು ತಮ್ಮ ಎದುರಿನಲ್ಲಿ ಇಟ್ಟಿದ್ದೇವೆ. ಈ 28 ಬೇಡಿಕೆಗಳ ಬಗ್ಗೆಯೂ ಕೂಡ ಅದರಲ್ಲಿ ಯಾರ್ಯಾರು ಪರಿಣಿತರಾಗಿರುತ್ತಾರೋ, ಅದರ ಬಗ್ಗೆ ಏನಾದರೂ ಚರ್ಚೆ ಮಾಡಲಿಕ್ಕೆ ಸಾಧ್ಯತೆ ಇದ್ದರೆ, ತಾವು ಚರ್ಚೆ ಮಾಡ ಬಹುದು. performance budget ಮತ್ತು annual report ಆದಾರವಾಗಿಟ್ಟು ಕೊಂಡು ನಾವು ಚರ್ಚೆ ಮಾಡುತ್ತೇವೆ ಎನ್ನುವುದಾಗಿದ್ದರೆ, ದಯವಿಟ್ಟು ಬೇರೆ ಕಲಾಪಗಳನ್ನು ತೆಗೆದುಕೊಳ್ಳಿ. ಅದಕ್ಕೆ ನಮ್ಮದೇನೂ ಆಕ್ಷೇಪಣೆ ಇಲ್ಲ. ಅದು ನಿಮಗೆ ಬಿಟ್ಟದ್ದು. ಸರ್ಕಾರದ ಕಡೆಯಿಂದ ತಪ್ಪಾಗಿದೆ, ವಿಳಂಬವಾಗಿದೆ ಇದರ ಬಗ್ಗೆ ನಾನು ವಾದ ಮಾಡಲಿಕ್ಕೆ ತಯಾರಿಲ್ಲ.

ಶ್ರೀ ಆರ್.ವಿ.ದೇಶಪಾಂಡೆ: Performance Budget ಮತ್ತು Annual Report ಇಲ್ಲದೆ ಚರ್ಚೆ ಮಾಡಲಿಕ್ಕೆ ಸಾಧ್ಯವೇ ಎಂಬುದನ್ನು ತಾವೇ ಹೇಳಿ. Is it possible? as he rightly said it is impossible. ಸರ್ಕಾರ ಒಳ್ಳೆಯ ಕೆಲಸ ಮಾಡಿದ್ದರೆ, ಅದರ ಪ್ರಶಂಸೆಯನ್ನೂ ಸಹ ಮಡಬೇಕಾಗುತ್ತದೆ. ಅದರ ಜೊತೆಗೆ ಟೀಕೆ ಟಿಪ್ಪಣಿಗಳನ್ನೂ ಸಹ ಮಾಡಬೇಕಾಗುತ್ತದೆ. ಆದ್ದರಿಂದ ನಾನು ತಮಗೇನು ರಿಕ್ವೆಸ್ಟ್ ಮಾಡುತ್ತೇನೆ ಎಂದರೆ ತಾವೇ ಹೇಳಿದ ಹಾಗೆ Performance Budget ಮತ್ತು Annual Report ಕೊಟ್ಟ ನಂತರ ಚರ್ಚೆಯನ್ನು ಪ್ರಾರಂಭ ಮಾಡೋಣ. ಎರಡನೆಯದಾಗಿ, ಎಲ್ಲಾ ಅಧಿಕಾರಿಗಳೂ ಸಹ ಇಲ್ಲೇ ಹಾಜರಿರಬೇಕೆಂದು ನಾನು ಹೇಳಲಿಕ್ಕೆ ಹೋಗುವುದಿಲ್ಲ. ಚರ್ಚೆ ಶುರುವಾದಾಗ ಪ್ರತಿಯೊಂದು ಇಲಾಖೆಯಿಂದಲೂ ಅದಿಕಾರಿಗಳು ಇಲ್ಲಿ ಇರುವ ವ್ಯವಸ್ಥೆಯನ್ನು ಮಾಡಿ.

ಶ್ರೀ ಎಂ.ಪಿ.ಪ್ರಕಾಶ್: ಸನ್ಮಾನ್ಯ ಸಭಾಧ್ಯಕ್ಷರೆ, ಈ ವಿಚಾರದಕ್ಕೆ ಸಚಿವ ಸಂಪುಟದ ಸಬೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳೂ ಕೂಡ ಆದೇಶವನ್ನು ಕೊಟ್ಟಿದ್ದಾರೆ. ಇದರ ಜೊತೆಗೆ ತಾಂತ್ರಿಕ ಕಾರಣ ಅಥವಾ ಮತ್ತಿತರ ಕಾರಣಗಳೂ ಇರಬಹುದು. ಹಿಂದೆ ಅನೇಕ ಬಾರಿ ಈ ರೀತಿ ವಿಳಂಬವಾದ ಸಂದರ್ಭಗಳು ಇವೆ. ತಮ್ಮಲ್ಲಿ ಇರುವವರೂ ಕೂಡ ಅನೇಕ ಬಾರಿ ಸರ್ಕಾರಗಳಲ್ಲಿದ್ದೀರಿ. ನಿಮ್ಮ ಅಭಿಪ್ರಾಯವನ್ನು ನಾವು ಒಪ್ಪಿದ್ದೇವೆ. ಹಿಂದೆ

ವಿಳಂಬವಾದ ಸಂದರ್ಭಗಳಲ್ಲಿ ಚರ್ಚೆಯನ್ನು ಪ್ರಾರಂಭ ಮಾಡಿದ ಉದಾಹರಣೆಗಳಿವೆ. ಇದು ತಮಗೆ ಬಿಟ್ಟಿರತಕ್ಕದ್ದು, ಅದು ತಮ್ಮ ಅಧಿಕಾರ. ತಾವು ಚರ್ಚೆ ಮಾಡುವುದು ಬೇಡ ಎನ್ನುವುದಾದರೆ, ಬೇರೆ ಕಲಾಪಗಳನ್ನು ಕೈಗೆತ್ತಿಕೊಳ್ಳೋಣ. ನಾಳೆ ರಿಪೋರ್ಟ್ ಬಂದಮೇಲೆ ಚರ್ಚೆಯನ್ನು ಶುರು ಮಾಡೋಣ.

ಶ್ರೀ ಬಿ.ಶಿವರಾಂ: ನಾಳೆ ನಾವು ಚರ್ಚೆ ಮಾಡಬೇಕೆಂದರೂ ಕೂಡ, ನಾವು ತಯಾರಾಗಿ ಬರಬೇಕಾದರೆ ಒಂದೆರಡು ದಿವಸ ಮುಂಚೆಯೇ ಮಾಹಿತಿ ಒದಗಿಸಬೇಕಾಗುತ್ತದೆ. ಕಳೆದ ಸಲ ಕೂಡ ತಾವು ಬಹಳ ಸ್ಪಷ್ಟವಾಗಿ ಹೇಳಿದ್ದೀರಿ. ಹಿಂದೆ ಇದೇ ಸಮಸ್ಯೆ ಉದ್ಭವಿಸಿದಾಗ ಮುಂದೆ ಇನ್‌ಟೈಮ್ ಕಳುಹಿಸುತ್ತೇವೆ ಎನ್ನುವಂತಹ ಮಾತನ್ನು ಹೇಳಿದ್ದಿರಿ. ಈ ಬಾರಿಯೂ ಅದೇ ಪರಿಸ್ಥಿತಿ ಉದ್ಭವವಾಗುತ್ತಿದೆ. ಇದರಿಂದ ಏನು ಪರಿಹಾರ ವಾದಂತಾಯಿತು? ಮುಂದಿನ ಸಾರಿಯೂ ಇದೇ ಮುಂದುವರೆದರೆ ಹೇಗೆ ಇದನ್ನು ಸುಧಾರಣೆ ಮಾಡುತ್ತೀರಿ? ಎಂಬುದನ್ನು ಹೇಳಿ. ಬೇರೆ ಕೆಲವು ಇಲಾಖೆಗಳದ್ದು ಕಳುಹಿಸದ್ದೇವೆ ಎಂದೇನು ಹೇಳುತ್ತಿದ್ದೀರಿ, ಅವುಗಳೂ ಕೂಡ ನಮಗೆ ತಲುಪಿಲ್ಲ. ಕೃಷಿ ಇಲಾಖೆಯದ್ದೂ ನಮಗೆ ಬಂದಿಲ್ಲ. ಅದನ್ನು ತಾವು ಆಗಲೇ ಹೇಳಲಿಲ್ಲ.

(ಗೊಂದಲ)

ಶ್ರೀ ಬಸವರಾಜರಾಯರೆಡ್ಡಿ: ಮಾನ್ಯ ಅಧ್ಯಕ್ಷರೆ, Practice and Pricedure of Parliament ಅದರಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. "Discussion on Demand for Grants" prior to the General Budget, the Demands for grants (Part I and II) were made availabke to members on the day of the presentation f the Budget and Part III i.e. detailed Demands for grants were laid on the Table of the House a week or two before they were taken up for discussion in the House".

ಸ್ಪಷ್ಟವಾಗಿ ಇದರಲ್ಲಿ ಹೇಳಿದ್ದಾರೆ discussion ಮಾಡಬೇಕಾದರೆ, ಕನಿಷ್ಠ ಒಂದು ವಾರ ಅಥವಾ ಎರಡುವಾರ ಮುಂಚೆಯೇ ತಾವು ಸದನಕ್ಕೆ ಸವಿಸ್ತಾರವಾದಂತಹ Demands for grants ಅನ್ನು ಕೊಡಬೇಕೆಂದು ಹೇಳಿದ್ದಾರೆ. ಅದನ್ನು ತಾವೂ ಕೂಡ ಒಪ್ಪಿಕೊಂಡಿದ್ದಿರಿ. ಅದ್ನು ಕೊಡದಿದ್ದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ.

(ಗೊಂದಲ)

ಅದೆ ಡಿಮ್ಯಾಂಡ್ಸ್ ಅನ್ನು ನೀವು ಹೇಗೆ ಇಲ್ಲಿ ಮಂಡಿಸುತ್ತೀರಿ?it is not printed.

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೆ, ತಾವು ಈ ಕಲಾಪಗಳು ಇನ್ನೂ ಚೆನ್ನಾಗಿ ನಡೆಯಬೇಕು ಎನ್ನತಕ್ಕಂಥ ಭಾವನೆಯನ್ನು ವ್ಯಕ್ತ ಮಾಡಿದ್ದಿರಿ, ಎಲ್ಲಾ ಇಲಾಖೆಗಳಿಂದಲೂ ವರದಿಗಳು ಬಂದಿಲ್ಲವೆಂದಲ್ಲ. ಕೆಲವು ಇಲಾಖೆಗಳ ವರದಿಗಳು ಬಂದಿವೆ. ಅವುಗಳ ಪಟ್ಟಿಯನ್ನು ನಾನಿಲ್ಲಿ ಓದುತ್ತೇನೆ. ಅವುಗಳ ಪಟ್ಟಿಯೇ ಜಾಸ್ತಿ ಇದೆ. ಮೀನುಗಾರಿಕೆ ಇಲಾಖೆ 18.05 ಕ್ಕೆ ಕಳುಹಿಸಿದ್ದಾರೆ. ಜಲಸಂಪನ್ಮೂಲ ಇಲಾಖೆ 05.07.2007 ಕ್ಕೆ ಕಳುಹಿಸಿದ್ದಾರೆ. ಲೋಕೋಪಯೋಗಿ ಇಲಾಖೆ 12.07.2007 ಕ್ಕೆ ಕಳುಹಿಸಿದ್ದಾರೆ. ಇಂಧನ ಇಲಾಖೆಯವರು 07.07.2007 ರಂದು ಕಳುಹಿಸಿದ್ದಾರೆ. ಕಾರ್ಮಿಕ ಇಲಾಖೆಯವರು 11.07.2007 ಕ್ಕೆ ಕಳುಹಿಸಿದ್ದಾರೆ. ಯೋಜನಾ ಮತ್ತು ಸಾಂಖ್ಯಿಕ ಇಲಾಖೆ 28.03.2007 ಕ್ಕೆ ಕಳುಹಿಸಿದ್ದಾರೆ. ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಕೆಯವರೂ ಸಹ ಅವತ್ತೇ ಕಳುಹಿಸಿ ಕೊಟ್ಟಿದ್ದಾರೆ. ಸಮಾಜ ಕಲ್ಯಾಣ, ಪೋಲೀಸ್ ಪಶುಪಾಲನೆ ಮತ್ತು ವೈದ್ಯಕೀಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ವಸತಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳ ವರದಿಗಳನ್ನು ಕಳುಹಿಸಿದ್ದಾರೆ.

(ಗೊಂದಲ)

ವಿವಿಧ ಇಲಾಖೆಗಳಿಂದ ಇದುವರೆಗೂ ಸ್ವೀಕೃತವಾದ 2006–07 ನೇ ಸಾಲಿನ ಮುಂಗಡ ನಿರ್ವಹಣಾ ಪತ್ರಿಕೆ ಪಟ್ಟಿಯನ್ನು ನಾನು ತಮ್ಮ ಮುಂದೆ ಓದಿದೆ. ಈ ಎಲ್ಲಾ ಇಲಾಖೆಗಳಿಂದ ಮುಂಗಡ ನಿರ್ವಹಣಾ ಪತ್ರಿಕೆಯನ್ನು ಕಳುಹಿಸಿಕೊಡಲಾಗಿದೆ.

(ಗೊಂದಲ)

ಶ್ರೀ ಎಸ್.ಎಸ್.ಪಾಟೀಲ: ಎಲ್ಲವನ್ನೂ ನಮಗೆ ಕಳುಹಿಸಿಕೊಡಿ. ತಾವು ಕಳುಹಿಸಿಕೊಟ್ಟಿದ್ದರೂ ಅವುಗಳು ನಮಗೆ ಇನ್ನು ಬಂದಿಲ್ಲ.

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್: ವರದಿಗಳು ಬಂದಿರತಕ್ಕಂಥ ಇಲಾಖೆಗಳ ಬಗ್ಗೆಯಾದರೂ ಚರ್ಚೆ ಮಾಡಲು ತಯಾರಾಗಿ.....

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ: Performance Budget ನಮಗೆ ಬಂದಿಲ್ಲ. ನಿವು ಕಳುಹಿಸಬಹುದು. ಆದರೆ ಅವುಗಳು ನಮಗೆ ಬರಬೇಕಲ್ಲವೇ..?

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್: ವಾರ್ಷಿಕ ವರದಿ ಮತ್ತು ನಿರ್ವಹಣಾ ಪತ್ರ ಎರಡನ್ನೂ ಕಳುಹಿಸಿರುವ ಇಲಾಖೆಗಳ ವಿವರ ನಮ್ಮ ಬಳಿ ಇದೆ.

(ಗೊಂದಲ)

ಮಾನ್ಯ ಅಧ್ಯಕ್ಷರು ಒಪ್ಪುವುದಾದರೆ ನಿಮ್ಮ ಹತ್ತಿರ ಇದೆಲ್ಲವೂ ಕೂಡ ಬಂದಿವೆ, ಯಾವ್ಯಾವ ಇಲಾಖೆಯದು ಬಂದಿವೆ ಅವಕ್ಕೆ ತಯಾರಾಗಿ, ಅರ್ಥಪೂರ್ಣ ಚರ್ಚೆಯಾಗಬೇಕು ಸುಮ್ಮನೆ ಚರ್ಚೆಯಾಗ ಬೇಕಾಗಿರು

ವುದಿಲ್ಲ. ಆ ಕಾರಣಕ್ಕೆ ಈಗ ಯಾವ್ಯಾವು ಬಂದಿವೆ ಆ ಬಗ್ಗೆ ಬೇಕಾದರೆ ನಾಳೆ ತಾವು ಚರ್ಚೆ ಮಾಡಿ.

ಶ್ರೀ ಸಿದ್ದರಾಮಯ್ಯ: ನಾಳೆ ಶುಕ್ರವಾರ ಚರ್ಚೆ ಮಾಡುವುದಕ್ಕೆ ಯಾರು ತಯಾರಾಗುವುದಿಲ್ಲ. ಸೋಮವಾರದಿಂದ ಮಾಡೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು): ಇಲ್ಲಿ ನಾವು ನಮ್ಮ ಕರ್ತವ್ಯವನ್ನು ಮಾಡಬೇಕು, ಕೆಲವು ವ್ಯತ್ಯಾಸಗಳಿವೆ ಅವನ್ನು ಸರಿಪಡಿಸೋಣ, ನಾನು ಅದರ ಬಗ್ಗೆ ಏನು ಚರ್ಚೆ ಮಾಡುತ್ತಿಲ್ಲ. ವಾರ್ಷಿಕ ವರದಿ ಮುಂಗಡ ನಿರ್ವಹಣಾ ಪತ್ರ 75–80% ಭಾಗ ಬಂದಿದೆ, ಯಾವುದು ನಿಮ್ಮ ಕೈ ಸೇರಿಲ್ಲ ಹೇಳಿ. ನಾವು ಎರಡು ಪಟ್ಟಿಯನ್ನು ಈ ಮನೆಯಲ್ಲೆ ನಿಂತುಕೊಂಡು ನಾನಾಗಲೀ ಗೃಹ ಸಚಿವರಾಗಲೀ ಹೇಳಬೇಕಾದರೆ, ಜವಾಬ್ದಾರಿಯಿಂದ ಮಾತನಾಡಬೇಕಾಗುತ್ತದೆ. ಯಾವುದು ಪ್ರತಿಗಳು ತಲುಪಿಲ್ಲವೋ ಅವನ್ನು ತಲುಪಿಸೋಣ. ಆದರೆ, ನಾವು ನಿಮಗೆ 18.05.2007 ರಿಂದ ವಾರ್ಷಿಕ ವರದಿಯನ್ನು ಕೊಡುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಮೀನುಗಾರಿಕೆಯನ್ನು 18.05.2007 ರಲ್ಲೇ ಕಳುಹಿಸಿದ್ದೇವೆ. ಲೋಕೋಪಯೋಗಿ ಕಳುಹಿಸಿಕೊಟ್ಟಿದ್ದೇವೆ. ಹೀಗೆ 6–7– ಬಿಟ್ಟು ವಾರ್ಷಿಕ ವರದಿ ಮತ್ತು ಮುಂಗಡ ನಿರ್ವಹಣಾ ಪತ್ರ ಎಲ್ಲವನ್ನೂ ಕಳುಹಿಸಿಕೊಟ್ಟಿದ್ದೇವೆ ನಿಮಗೆ ಯಾವುದು ಸಿಕ್ಕಿದೆ ಅದರ ಮೇಲೆ ಚರ್ಚೆ ಆರಂಭ ಮಾಡಿ, ಉಳಿದಿದ್ದನ್ನು ತಲುಪಿಸುವ ವ್ಯವಸ್ಥೆಯನ್ನು ನಾವು ಮಾಡುತ್ತೇವೆ. ಇದುವರೆಗೆ ನಡೆದುಕೊಂಡು ಬಂದಂತೆ ನಿಮ್ಮ ಕಾಲದಲ್ಲಿ ಯಾವಾಗ ಏನು ಮಾಡಲಾಗಿದೆ ಎಂಬುದನ್ನು ಎಲ್ಲವನ್ನೂ ತರಿಸಿಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ: ನಮ್ಮ ಕಾಲದಲ್ಲಿ ಏನಾಗಿತ್ತೆಂದು ಈಗ ಜ್ಞಾಪಕ ಮಾಡಿಕೊಳ್ಳುವುದು ಬೇಡ, ಈಗ ನಿಮ್ಮ ಕಾಲದ್ದು ತಾನೇ ಚರ್ಚೆ ಯಾಗಬೇಕಾಗಿರುವುದು, ಇಲ್ಲ ಕುಳಿತುಕೊಂಡು ನಮ್ಮ ಕಾಲದ್ದನ್ನು ಚರ್ಚೆ ಮಾಡುವುದಕ್ಕಾಗುತ್ತದೆಯೇ?

ಶ್ರೀ ಬಿ.ಎಸ್.ಎಡಿಯೂರಪ್ಪ: ನೀವು ಯಾವ ದಾರಿಯನ್ನು ಹಾಕಿಕೊಟ್ಟಿದ್ದಿರೋ ಅದೇ ದಾರಿಯಲ್ಲಿ ನಾವು ಮುಂದುವರೆದಿದ್ದೇವೆ.

ಶ್ರೀ ಸಿದ್ದರಾಮಯ್ಯ: ಅದೇ ದಾರೀನಾ ನಿಮ್ಮದು ಬೇರೆ ದಾರಿಯಿಲ್ಲವೇ?

ಶ್ರೀ ಬಿ.ಎಸ್.ಎಡಿಯೂರಪ್ಪ: ಬೇರೆ ದಾರಿ ಎಲ್ಲಿದೆ, ಎಲ್ಲರದ್ದು ಒಂದೇ ದಾರಿ, ನಿಮ್ಮ ಕಾಲದಲ್ಲಿ ಇದ್ದ ಅದೇ ಅಧಿಕಾರಿಗಳು ಇವತ್ತು ಇರುವುದು ಅದೇ ಅಧಿಕಾರಿಗಳು.

ಶ್ರೀ ಸಿದ್ದರಾಮಯ್ಯ: ಅಧ್ಯಕ್ಷರೆ, ಅದೇ ಅಧಿಕಾರಿಗಳು ನಾವು ಮಂತ್ರಿಯಾಗಿದ್ದಾಗ ಒಂದು ರೀತಿ ಕೆಲಸ ಮಾಡುತ್ತಾರೆ. ಅದೇ ಅಧಿಕಾರಿಗಳು ಬೇರೆ ಬೇರೆ ಮಂತ್ರಿಗಳಾದಾಗ ಬೇರೆ ಬೇರೆ ರೀತಿಯಲ್ಲಿ ಕೆಲಸ ಮಾಡುತ್ತಾರೆ.

ಶ್ರೀ ಬಿ.ಎಸ್.ಎಡಿಯೂರಪ್ಪ: ನಿಮಗೆ ಯಾವುದು ತಲುಪಿಲ್ಲ ಅದನ್ನು ತಲುಪಿಸುತ್ತೇನೆ, ಯಾವುದನ್ನು ಕೊಟ್ಟದ್ದೇವೆ ಅದರ ಮೇಲೆ ಚರ್ಚೆ ಮಾಡಿ.

ಶ್ರೀ ಸಿದ್ದರಾಮಯ್ಯ: ಪರ್ಫಾರ್ಮೆನ್ಸ್ ಬಜೆಟ್ ನೆನ್ನೆಯವರೆಗಂತೂ ನಮಗೆ ಬಂದಿರಲಿಲ್ಲ. ಇವತ್ತು ಮನೆಯಲ್ಲಿ ಓದಿಕೊಳ್ಳುತ್ತೇವೆ. ಯಾವುದು ಬರದೇ 28 ಇಲಾಖೆಯದನ್ನು ಮಂಡಿಸಿ ಯಾವುದೋ ಒಂದು ಸೆಲೆಕ್ಟ್ ಮಾಡಿಕೊಂಡು ಮಾತನಾಡಿ ಎಂದರೆ ಹೇಗೆ?

ಅಧ್ಯಕ್ಷರು: ನೋಡಿ ಈಗಾಗಲೇ 6 ದಿವಸಗಳು ಕಳೆದವು.

ಶ್ರೀ ಸಿದ್ದರಾಮಯ್ಯ: ಅದಕ್ಕೆ ನಾನು ಜವಾಬ್ದಾರನೇ, Are we responsible? is opposition responsible for this? Government is responsible.

ಅಧ್ಯಕ್ಷರು: ಇವರು ರೆಸ್ಪಾನ್ಸಿಬಲ್ಲೋ ಅವರು ರೆಸ್ಪಾನಸಿಬಲ್ಲೋ ಎಂದು ನಾನು ಹೇಳುತ್ತಿಲ್ಲ. ಎಲ್ಲವನ್ನೂ ಒಂದೇ ಸಾರಿ ಮಂಡಿಸಿದರೆ, ಎಲ್ಲರೂ ಅವರವರ ಆಸಕ್ತಿಗೆ ತಕ್ಕಂತೆ ಮಾತನಾಡುತ್ತಾರೆ. ಚರ್ಚೆ ಅರ್ಥಪೂರ್ಣ ವಾಗಲೆಂದು ಹೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ: ಅಧ್ಯಕ್ಷರೆ, ದಯಮಾಡಿ ನನ್ನ ಮಾತನ್ನು ಕೇಳಿ, 5 ನೇ ತಾರೀಖು ನೀವು ಅಜೆಂಡಾದಲ್ಲಿ ಬೇಡಿಕೆಗಳನ್ನು ಇಟ್ಟಿಬಿಟ್ಟಿದ್ದಿರಿ. 5 ನೇ ತಾರೀಖೆಗೆಲ್ಲಾ ವರದಿಗಳು ಬಂದಿದ್ದವೇ? ಬೇಡಿಕೆಗಳನ್ನು ಹೇಗೆ ಇಟ್ಟಿರಿ? ಆಯಿತು 5ನೇ ತಾರೀಖು ಎಷ್ಟು ಇಲಾಖೆಯದನ್ನು ಇಟ್ಟಿದ್ದಿರಿ. 13,14, ಇಲಾಖೆಗಳದನ್ನು ಇಟ್ಟು ಬಿಟ್ಟಿದ್ದಿರಿ, ಈಗ ತಪ್ಪನ್ನು ಕಂಡುಹಿಡಿಯುತ್ತಿಲ್ಲ, ವಿಚಾರವನ್ನು ಹೇಳಿದೆ ಅಷ್ಟೆ.

ಶ್ರೀ ಎಂ.ಪಿ.ಪ್ರಕಾಶ್: ಈ ಬಗೆಗಿನ ಎಲ್ಲಾ ತಪ್ಪುಗಳಿಗಾಗಿ ಸರ್ಕಾರದಿಂದ ನಾನು ವಿಷಾದವನ್ನು ವ್ಯಕ್ತ ಪಡಿಸುತ್ತೇನೆ.

ಶ್ರೀ ಸಿದ್ದರಾಮಯ್ಯ: ಹಾಗಾದರೆ ಸರ್ಕಾರ ನಡೆಸುವವರ ತಪ್ಪನ್ನು ನಾವು ಹೇಳಲೇಬಾರದು ಸುಮ್ಮನೆ ಇರಬೇಕು.

ಶ್ರೀ ಎಂ.ಪಿ.ಪ್ರಕಾಶ್: ಆದರೆ ಹಿಂದಿನ ಸಂಪ್ರದಾಯ ಹೇಗಿತ್ತು, ಅದೇ ಸಂಪ್ರದಾಯವನ್ನು ಈಗಲೂ ಪರಿಪಾಲಿಸಿದ್ದೇವೆ, ನಾಳೆಯೇ ದಾಖಲೆಗಳನ್ನು ಕೊಡುತ್ತೇವೆ, ನಾವು ಯಾವಾಗ ಈ ತರಹದಲ್ಲಿ ಲೇಖಾನುದಾನವನ್ನು ತೆಗೆದುಕೊಂಡಿದ್ದೇವೆ, ಹಾಗೆ ಎಲ್ಲಾ ಇಲಾಖೆಗಳನ್ನು ಒಟ್ಟಿಗೆ ಹಾಕಿ ಲೇಖಾನುದಾನವನ್ನು ತೆಗೆದುಕೊಂಡಿರುವುದನ್ನು ತೋರಿಸುತ್ತೇನೆ.

ಶ್ರೀ ಸಿದ್ದರಾಮಯ್ಯ: ಅದು ಯಾವಾಗ ಎಂದರೆ ಗಲಾಟೆಗಳಾದಾಗ ಹೋದ ವರ್ಷವು ಹಾಗೆ ಆಗಿದೆ, ಆಚೆ ವರ್ಷವು ಕೂಡ ಆಗಿದೆ, ಧರಣಿ ನಡೆದಾಗ ಹಾಗೆ ಆಗಿದೆ.

ಶ್ರೀ ಎಂ.ಪಿ.ಪ್ರಕಾಶ್: ಗಲಾಟೆಯಾಗುವುದನ್ನು ಯಾರೂ ಊಹೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎನ್ ಧರ್ಮಸಿಂಗ್: ಬೇಡಿಕೆ ಬಂದಾಗ they have to place ಟೇಬಲ್ ಮೇಲೆ ಇರುವುದನ್ನು ಕೊಡಲಿ, unless they are not available ಅಧ್ಯಕ್ಷರೆ, ಇದು ತಮ್ಮ ಕೆಲಸ, ಇದೆಲ್ಲಾ ಆಗ್ಲೇ ಬೇಕು, ನಾವು ತಕರಾರು ತೆಗೆಯುತ್ತಿಲ್ಲ.

ಅಧ್ಯಕ್ಷರು: ಪ್ರಕಾಶ್‌ರವರೆ ಈಗ, ಯಾವ ಪರ್ಫಾರ್ಮೆನ್ಸ್ ಬಜೆಟ್ ಬಂದಿದೆ ಎನ್ನುವುದನ್ನು ಹೇಳಿದ್ದಿರಿ. ಆಗಲೇ ರಾಯರೆಡ್ಡಿಯವರು ಇನ್ನು ಪ್ರಿಂಟೇ ಆಗಿಲ್ಲವೆಂದು ಹೇಳಿದರು. ಇದು ಸರಿಹೋಗುವುದಿಲ್ಲ, ಅದಕ್ಕೆ ಉಳಿದಿದ್ದನ್ನು ಆದಷ್ಟು ಬೇಗ ಸೂಚನೆಯನ್ನು ಕೊಟ್ಟು ಎಲ್ಲವನ್ನೂ ಇನ್ನು 2–3– ದಿವಸಗಳಲ್ಲಿ ಅಚ್ಚು ಹಾಕಿಸಿ ಎಲ್ಲರಿಗೂ ಕೊಡುವ ವ್ಯವಸ್ಥೆಯನ್ನು ಮಾಡಬೇಕು. ಬಂದಿರುವುದರ ಬಗ್ಗೆ ನಾಳೆಯಿಂದ ಮಾತನಾಡಲಿ.

ಶ್ರೀ ಆರ್.ವಿ.ದೇಶಪಾಂಡೆ: ಅಧ್ಯಕ್ಷರೆ, ನೀವು ಈಗ ಬೇಡಿಕೆಗಳನ್ನು ಇಟ್ಟಿದ್ದಿರಿ. ನಾನೇ ಮಾತನಾಡುವುದಕ್ಕೆ ನಿಂತರೆ, ನಾನೇನು ಹತ್ತಾರು ಬಾರಿ ಒಲ್ಲಿ ಮಾತನಾಡುವುದಕ್ಕಾಗುವುದಿಲ್ಲ. ನಾನು ಒಂದೆ ಸಾರಿ 3–4– ಬೇಡಿಕೆಗಳ ಬಗ್ಗೆ, ಕೈಗಾರಿಕೆ ಆಗಬಹುದು, ಸಹಕಾರವಾಗಬಹುದು, ಮಾತನಾಡುತ್ತೇನೆ. ಇಲ್ಲಿ ಎರಡು ವಾರ್ಷಿಕ ವರದಿಗಳಿವೆ. ಎರಡು ಇಲ್ಲ ನಾನು ಹೇಗೆ ಮಾತನಾಡಬೇಕು? ಎರಡರ ಬಗ್ಗೆ ಮಾತನಾಡಿದ್ದಿರಿ ಮತ್ತೆರಡರ ಬಗ್ಗೆ ಮೂರು ದಿವಸಗಳನ್ನು ಬಿಟ್ಟು ಮಾತನಾಡಿ ಎಂದು ಹೇಳುತ್ತೀರಾ? ಎಲ್ಲಾ ರಿಪೋರ್ಟ್‌ಗಳು ಎಲ್ಲಾ ಪರ್ಫಾಮೆನ್ಸ್‌ಗಳು ರಿಪೋರ್ಟ್‌ಗಳಿದ್ದಾಗ ಯಾವ ಬಗ್ಗೆ ಮಾತನಾಡಬೇಕು. ಅವುಗಳ ಬಗ್ಗೆ ನಾನು ಒಂದೇ ಸಾರಿ ಮಾತನಾಡಿ ಮುಗಿಸುತ್ತೇನೆ, ಈಗ ಹೇಗೆ ಮಾತನಾಡುವುದಕ್ಕೆ ಸಾಧ್ಯವಿದೆ.

ಶ್ರೀ ಸಿದ್ದರಾಮಯ್ಯ: ಯಾವುದನ್ನು ಕೊಡುತ್ತಾರೆ, ಈ ಬಗ್ಗೆ ಮಾತನಾಡಿ ಬೇರೆಯದನ್ನು ಬಿಟ್ಟುಬಿಟ್ಟು ನಿಂತುಕೊಳ್ಳುವುದಷ್ಟೆ, ಅಧ್ಯಕ್ಷರೆ, ನಿವು ಇನ್ನೊಂದು ಸಾರಿ ಮಾತನಾಡುವುದಕ್ಕೆ ಅವಕಾಶ ಕೊಡುತ್ತೀರಾ? ಅದು ಕೊಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು: ಈಗ ಏನಾಗಿದೆ ಎಂದರೆ, ಇಲ್ಲಿ ನಮಗೇನು ಗೊತ್ತಾಗಿದ್ದು ಇಲ್ಲೆಲ್ಲಾ ಕೆಟ್ಟ ಸಂಪ್ರದಾಯ ಬೆಳೆದುಕೊಂಡು ಬಂದುಬಿಟ್ಟಿದೆ.

ಶ್ರೀ ಸಿದ್ದರಾಮಯ್ಯ: ನಿಮ್ಮ ಕಾಲದಲ್ಲಿ ಸರಿಪಡಿಸಿ ಸ್ವಾಮಿ.

ಅಧ್ಯಕ್ಷರು: ನಾನೇನು ಸರಿಪಡಿಸುವುದಕ್ಕಾಗುತ್ತದೆ, ನೀವು ಮಂತ್ರಿಗಳಾಗಿದ್ದವರು ಕೆಟ್ಟ ಸಂಪ್ರದಾಯವನ್ನು ಹಾಕಿಕೊಂಡು ಬಂದು ಬಿಟ್ಟಿದ್ದೀರಿ.

ಈಗ ನಿವು ಬಂದ ದಾರಿಯಲ್ಲಿ ನಾವು ಹೋಗುತ್ತಿದ್ದೇವೆಂದು ಅವರು ಹೇಳುತ್ತಿದ್ದಾರೆ ನೋಡಿ. ಆದುದರಿಂದ ಇನ್ನು ಮುಂದೆ ಒಂದು ನಿಗದಿತ ಅವಧಿಯಲ್ಲಿ ಎಲ್ಲವನ್ನೂ ಮಂಡಿಸಬೇಕು.

ಶ್ರೀ ಡಿ.ಟಿ.ಜಯಕುಮಾರ್ (ವಸತಿ ಸಚಿವರು): ಅಧ್ಯಕ್ಷರೆ, ಒಬ್ಬ ಸದಸ್ಯರು ಎಲ್ಲಾ ಬೇಡಿಕೆಗಳ ಮೇಲೆ ಮಾತನಾಡುವುದಕ್ಕಾಗುವುದಿಲ್ಲ. ಒಬ್ಬ ಸದಸ್ಯರು ಎಲ್ಲಾ ಇಲಾಖೆಗಳ ಬೇಡಿಕೆಗಳ ಮೇಲೆ ಮಾತನಾಡಲು ಒಂದು ದಿವಸ ಒಬ್ಬರಿಗೆ ಬೇಕಾಗುತ್ತದೆ. ಯಾರ್ಯಾರಿಗೆ ಯಾವುದರ ಆಸಕ್ತಿ ಇದೆಯೋ ಅದರ ಬಗ್ಗೆ ಮಾತನಾಡಲಿ, ಅವಕಾಶ ಕೊಡಿ.

ಅಧ್ಯಕ್ಷರು: ಜಯಕುಮಾರ್‌ರವರೇ, ಅವರು ಹೇಳುವುದು ಸರಿಯಿದೆ. ಹಿಂದಿನಿಂದಲೂ ಕೆಟ್ಟ ಸಂಪ್ರದಾಯವನ್ನು ಬೆಳೆದುಕೊಂಡು ಬಂದು ಬಿಟ್ಟಿದೆ. ಈಗ ಯಾವ ಬೇಡಿಕೆಗಳು ಬಂದಿವೆ ಅವುಗಳ ಬಗ್ಗೆ ಮಾತನಾಡುವವರು ಮಾತನಾಡಲಿ. ಸುಮಾರು 70–75% ಬಂದಿವೆ ಅದರ ಬಗ್ಗೆ ಮಾತನಾಡುವ ಸದಸ್ಯರುಗಳು ಇದ್ದರೆ, ಒಂದು ಕೆಲಸ ಮಾಡೋಣ, ಹಿಂದಿನ ಸಾಲಿನಿಂದ ಬರೋಣ, ಪರ್ಫಾರ್ಮೆನ್ಸ್ ಬಜೆಟ್ ಬಂದ ಮೇಲೆ ಮುಂದಿನ ಸಾಲಿನವರು ಮಾತನಾಡಲಿ.

ಶ್ರೀ ಡಿ.ಆರ್‌ಪಾಟೀಲ್: ವಿಷಯ ಸಮಿತಿಗಳನ್ನು ಮಾಡಿದರೆ ಎಲ್ಲಾ ಇಲಾಖೆಗಳ ಮುಖ್ಯಸ್ಥರು, ಕಾರ್ಯದರ್ಶಿಗಳು ಬರುವುದರಿಂದ ಅಲ್ಲಿ ಗ್ರಿಲ್ ಮಾಡುತ್ತೇವೆ. they become answrable. ಅವರು ನಿಮಗೆಲ್ಲಾ ಸಲಹೆ ಮಾಡಿ ವಿಷಯ ಸಮಿತಿಗಳನ್ನು ರದ್ದುಗೊಳಿಸುವಲ್ಲಿ ಯಶಸ್ವಿಯಾದರು, ದಯವಿಟ್ಟು ಮುಂದಿನ ಬಜೆಟ್ reintroduce ಮಾಡಿ, ವಿವರವಾದ ಚರ್ಚೆ ಮಾಡುವುದರಿಂದ ನಿಮಗೂ ಅನುಕೂಲವಾಗುತ್ತದೆ, ನಮಗೂ ಅನುಕೂಲವಾಗುತ್ತದೆ.

ಶ್ರೀ ಎಂ.ಪಿ.ಪ್ರಕಾಶ್: ವಿಷಯ ಸಮಿತಿಗಳ ವಿಚಾರವಾಗಿ ಮಾತ ನಾಡುವ ಸಂದರ್ಭದಲ್ಲಿ ಅನೇಕರು ಇದೇ ಶಾಸನ ಸಭೆಯಲ್ಲಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಬಹಳ ಜನ, ವಿಷಯ ಸಮಿತಿ ಗಳಿರಬೇಕು, ಇದ್ದರೆ ಕಾರ್ಯದರ್ಶಿಗಳ ಜೊತೆಗೆ ಸರ್ಕಾರದ ಆಡಳಿತದ

ವೆಲ್ಲಾ ಚಿತ್ರಣಗಳು ನಮಗೆ ಸಿಗುತ್ತವೆ ಎಂದು ಹೇಳಿದರು. ಆದರೆ ಅದರಲ್ಲಿದ್ದ ಒಂದು ಕೊರತೆ ಏನೆಂದರೆ ಏನೆಲ್ಲಾ ಚರ್ಚೆಯಾಗುತ್ತದೆ ಪತ್ರಿಕೆಗಳಲ್ಲಿ ಬರುವುದಿಲ್ಲ. ಇನ್ನಳಿದ ವಿಚಾರಗಳು ಗೊತ್ತಾಗುವುದಿಲ್ಲ. ಆದುದರಿಂದ ಬಹಳ ಜನ ಸದಸ್ಯರೇನು ಹೇಳಿದರೆಂದರೆ, ಈ ವಿಷಯ ಸಮಿತಿಗಳನ್ನು ನೀವು ಮಾಡುವುದರಿಂದ ನಾವು ಏನು ಪ್ರಶ್ನೆಗಳನ್ನು ಎತ್ತಿದೆವು ಸರ್ಕಾರ ಏನು ಉತ್ತರವನ್ನು ಕೊಟ್ಟಿತು ಎಂಬುದು ಬರುವುದಿಲ್ಲ. ಆದುದರಿಂದ ಬಜೆಟ್ ಮೇಲೆ ಚರ್ಚೆ ಮಾಡುವುದು, ವಿಷಯ ಸಮಿತಿಗಳನ್ನು ತೆಗೆದು ಹಾಕಿ ಎಂದು ಹೇಳಿದರು. ವಿಷಯ ಸಮಿತಿಯನ್ನು ಆಗ ತೆಗೆದುಹಾಕಲು ಒಂದು ಕಾನೂನು ಏನು ಬಂತೆಂದರೆ, ಸಾಧಾರಣವಾಗಿ ತಿಂಗಳಿಗೆ ವಿಷಯ ಸಮಿತಿಯ ಮೂರು ಸಬೆಗಳನ್ನು ಕರೆಯುತ್ತಿದ್ದೆವು. ಅದು ಯಾವುದೇ ಕಾರಣಕ್ಕೂ ಎರಡಕ್ಕಿಂತ ಹೆಚ್ಚಾಗಬಾರದು ಎನ್ನುವ ನಿರ್ಣಯ ಬಂತು. ಆಗ, ಎರಡರಲ್ಲಿ ಏನೂ ಮಾಡುವುದಕ್ಕಾಗುವುದಿಲ್ಲ, ಆದುದರಿಂದ ಅದನ್ನು ಬಿಟ್ಟು ಬಿಡೋಣವೆಂದು ಬಿಟ್ಟೆವು. ಈಗ ತಾವೆಲ್ಲಾ ಮಾನ್ಯ ಹಿರಿಯ ಸದಸ್ಯರು ವಿಷಯ ಸಮಿತಿ ಬಂದರೆ ಎಲ್ಲಾ ವಿಷಯಗಳು ಚೆನ್ನಾಗಿ ಅರ್ಥವಾಗುತ್ತದೆನ್ನುವ ಮಾತನ್ನು ಹೇಳಿದಿರಿ. ಹಾಗಿದ್ದಾಗ ಈ ಸಮಸ್ಯೆಗಳು ಹೆಚ್ಚು ಉದ್ಭವವಾಗುವುದಿಲ್ಲ. ಎಲ್ಲರೂ ಮಾತನಾಡುವುದಕ್ಕೆ ಅನುಕೂಲ ವಾಗುತ್ತದೆ. ಆ ಕಾರಣಕ್ಕಾಗಿ ತಾವು ಕೊಟ್ಟಿರುವ ಸಲಹೆಯನ್ನು ಇಟ್ಟುಕೊಂಡು ಮುಂದೆ ಬಿಸಿನೆಸ್ ಅಡ್ವೈಸರಿ ಕಮಿಟಿ ಸಭೆಯಲ್ಲಿ ಕುಳಿತುಕೊಂಡಾಗ, ಮತ್ತೆ ನಾವು ವಿಷಯ ಸಮಿತಿಯನ್ನು ಪುನರುಜ್ಜೀವನ ಗೊಳಿಸಬೇಕೇ ಹೇಗೆಂಬುದನ್ನು ಎಲ್ಲರೂ ಒಪ್ಪಿದರೆ, ಖಂಡಿತವಾಗಿ ಬರುವ ವರ್ಷದಿಂದ ಅದನ್ನು ಜಾರಿಗೆ ತರಬಹುದು. ಈಗಿರುವುದು ಇಷ್ಟೆ.

ಶ್ರೀ ಡಿ.ಆರ್.ಪಾಟೀಲ: ತಮಗೆ ಗೊತ್ತಿರುವಂತೆ ಪಾರ್ಲಿಮೆಂಟಿನಲ್ಲಿ subject committees are existing ಅವರು ಕಂಟಿನ್ಯೂ ಮಾಡಿಬಿಟ್ಟರು. ನಮ್ಮಲ್ಲಿ ಅವನ್ನು ವಿತ್‌ಡ್ರಾ ಮಾಡಿಕೊಳ್ಳುವುದರಲ್ಲಿ ಅಧಿಕಾರಿಗಳು ಯಶಸ್ವಿ ಯಾದರು. they will be grilled like any thing. They become accountable ,ಅವರು ಅವನ್ನು ತಪ್ಪಿಸುವುದರಲ್ಲಿ ಯಶಸ್ವಿಯಾದರು. ತಾವು ಈಗ ಅದನ್ನು ಮುಂದಿನ ಬಜೆಟ್‌ನಿಂದ ಇಂಟ್ರಡ್ಯುಸ್ ಮಾಡಲು ಒಪ್ಪಿ ಸರ್, ಯಡಿಯೂರಪ್ಪ ಸಾಹೇಬರು ತಲೆತೂಗಿಸುತ್ತಿದ್ದಾರೆ, ಅದರ ಬಗ್ಗೆ ವಿಚಾರ ಮಾಡುವ ಪ್ರಶ್ನೆಯೇ ಇಲ್ಲ, ದಯವಿಟ್ಟು ತಾವು ಅದನ್ನು ಒಪ್ಪಿರಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಡಿ.ಆರ್.ಪಾಟೀಲರೇ ಯಾರ ಕಾಲದಲ್ಲಿ ಆಯಿತು ಎಂದು ನಿಮಗೆ ಗೊತ್ತಿದೆ.

ಶ್ರೀ ಡಿ.ಆರ್.ಪಾಟೀಲ: ನಿಮ ಕಾಲದಲ್ಲಿಯೇ ರದ್ದಾಗಿದ್ದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನಾವೆಲ್ಲಾ ವಿಷಯ ಸಮಿತಿಗಳು ಬೇಕೆಂದು ಹೇಳುವಾಗಲೇ ಅವು ರದ್ದಾದವು. ನೀವು ಈಗ ಆ ಕಡೆ ಇದ್ದಿರಿ ಅಷ್ಟೆ.

ಶ್ರೀ ಎಂ.ಪಿ.ಪ್ರಕಾಶ್: ನಾನು ಮಾನ್ಯ ಡಿ.ಆರ್.ಪಾಟೀಲರ ಮಾತನ್ನು ಒಪ್ಪುತ್ತೇನೆ. ಮುಂದಿನ ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ಕುಳಿತು ಕೊಂಡು ತಾವುಗಳೆಲ್ಲಾ ಇದ್ದಿರಿ ಚರ್ಚೆ ಮಾಡೋಣ. ಹಿಂದೆ ಚರ್ಚೆ ಯಾಗಿಯೇ ನಿರ್ಣಯ ತೆಗೆದುಕೊಂಡಿರುವುದು. ಒಂದು ಒಳ್ಳೆಯ ಸಲಹೆ ಎಲ್ಲಾ ಹಿರಿಯರಿಂದ ಬಂದಿತು. ಅದನ್ನು ಮುಮದಿನ ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ಇಟ್ಟು ನಿರ್ಧಾರ ತೆಗೆದುಕೊಳ್ಳೋಣ. ಅದು ಬರುವ ವರ್ಷಕ್ಕೆ ಕಾರ್ಯರೂಪಕ್ಕೆ ಬರುತ್ತದೆ. ಈಗ ಸನ್ಮಾನ್ಯ ಅಧ್ಯಕ್ಷರೆ, ಕೆಲವು performance budget ಮತ್ತು ವಾರ್ಷಿಕ ವರದಿಗಳನ್ನು 100 ಕ್ಕೆ 75 ರಿಂದ 80 ರಷ್ಟು ಇಲಾಖೆಗಳ ವರದಿಗಳನ್ನು ಕೊಟ್ಟಿದ್ದೇವೆ. ಇನ್ನು ಎರಡು ಮೂರು ಇಲಾಖೆಗಳ ವರದಿಗಳು ಬರಬೇಕಾಗಿವೆ. ಅದನ್ನು ಕೊಟುತ್ತೇವೆ. ನಾವು ಇದುವರೆಗೆ ಏನು ಅಂದುಕೊಂಡಿದ್ದೆವು, ಇದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳುತ್ತಾರೆ ಎಂದು ಅಲ್ಲ. ಹಿಂದೆ ಎಲ್ಲಾ ಈ ತರಹದಲ್ಲಿ ತಪ್ಪುಗಳಾಗಿರತಕ್ಕಂಥದ್ದು ವಿಳಂಬವಾಗಿರತಕ್ಕಂಥದ್ದು ಇತ್ತು. ಹಾಗಿದ್ದಾಗ ಕೂಡ ನಾವು ಸಹಕಾರ ಕೊಟ್ಟಿದ್ದೇವೆ. ನಾವು ವಿರೋಧ ಪಕ್ಷದಲ್ಲಿದ್ದಾಗ ಕೂಡ ಸಹಕಾರ ಕೊಟ್ಟಿದ್ದೇವೆ. ಈಗಲೂ ಸಹಕಾರ ಬಯಸುತ್ತೇವೆ. ಆದರೆ ತಾಂತ್ರಿಕ ಕಾರಣಗಳಿಂದ ನಾವು ಏನಾದರೂ ತಪ್ಪು ಮಾಡಿದ್ದರೆ, ನೀವು ಕೂಡ ತಪ್ಪು ಮಾಡುತ್ತೀರಿ ಎನ್ನತಕ್ಕಂತಹ ಪ್ರಶ್ನೆ ಆದರೆ ನಮಗೆ ನಿರುತ್ತರ. ಆ ಕೆಲಸವನ್ನು ನಾವು ಮಾಡಲಿಕ್ಕೆ ತಯಾರಿಲ್ಲ. ಆದರೆ ತಾವು ಯಾರ್ಯಾರು ಮಾತನಾಡುವುದಕ್ಕೆ ಸಾಧ್ಯತೆ ಇದೆ, ತಾವು ಮಾತನಾಡಬಹದು. ನಾಳೆ ಕೆಲವು ವರದಿಗಳು ಪ್ರಾಯಶಃ ನಾಡಿದ್ದು ಕೆಲವು ವರದಿಗಳು ಬರುತ್ತವೆ.

ಅಧ್ಯಕ್ಷರು: ಮುಂದಿನ ಸಾಲಿನವರು ಎರಡು ಮೂರು ದಿವಸಗಳಾದ ಮೇಲೆ ಮಾತನಾಡಲಿ. ಹಿಂದಿನ ಸಾಲಿನವರಿಗೆ ಅವಕಾಶ ಕೊಟ್ಟರೆ ಅವರಿಗೆ ಆಸಕ್ತಿ ಇರುತ್ತದೆ. ದಯಮಾಡಿ ಕೇಳಿ, ಕೆಲವರೆಲ್ಲಾ ಅಭ್ಯಾಸ ಮಾಡ ಬೇಕಾಗುತ್ತದೆ. ಮಹತ್ವಪೂರ್ಣವಾಗಿ ಮತ್ತು ವಿಚಾರಪೂರ್ಣವಾಗಿ ಮಾತನಾಡಬೇಕಾಗುತ್ತದೆ. ಆ ಮೇಲೆ ಮಾತನಾಡಲಿ. ಹಿಂದಿನ ಸಾಲಿನವರು ನಮಗೆ ಅವಕಾಶ ಸಿಕ್ಕಿಲ್ಲವೆಂದು ಹೇಳುತ್ತಾರೆ. ಅವರೇನು ಜಾಸ್ತಿ ಸಬ್ಜೆಕ್ಟ್ ಬಗ್ಗೆ ಕವರ್ ಮಾಡುವುದಿಲ್ಲ. ಆ ಕಾರಣದಿಂದ ಹಿಂದಿನ ಸಾಲಿನವರಿಗೆ ಅವಕಾಶ ಕೊಡೋಣ. ಅದಾದ ಮೇಲೆ ನೀವು ಮುಂದಿನ ಸಾಲಿನವರು ಮಾತನಾಡಿ. ನಾಳೆಯಿಂದ ಅಷ್ಟು ಮಾಡೋಣ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ನೀವು ಹೇಳಿದ ಮಾತು ಹಿಂದಿನ ಸಾಲಿನಲ್ಲಿ ಎಲ್ಲಾ ದಡ್ಡರು ಬಮದಿದ್ದಾರೆ ಅಂದ ಹಾಗಾಯಿತು. ಬಹಳ ಜಾಣರು ಬಂದಿದ್ದಾರೆ ಅವರೂ ಓದಬೇಕು.

ಅಧ್ಯಕ್ಷರು: ಆ ತರಹ ಆಗಲ್ಲ ಸ್ವಾಮಿ, ಏನಾಗುತ್ತದೆ ಎಂದರೆ, ಅವರೇ ಹೇಳಿರತಕ್ಕಂಥಾದ್ದು. ಅವರ constituencyಗೆ ಸಂಭಂಧ ಪಟ್ಟಿದ್ದು ಎಲ್ಲಾ ಮಾತನಾಡುತ್ತಾರೆ. ಇದೆಲ್ಲಾ ನಾವು ನೋಡಿದ್ದೇವೆ. ಅದಕ್ಕೋಸ್ಕರ ಅಲ್ಲಿಂದ ಪ್ರಾರಂಭ ಮಾಡೋಣ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ನಮ್ಮ ಸದಸ್ಯರು ಬಜೆಟ್ ಮೇಲೆ ಮಾತನಾಡುವುದಕ್ಕೆ ಎಲ್ಲ ಹಕ್ಕು ಇದೆ.

ಶ್ರೀ ಸಿದ್ದರಾಮಯ್ಯ: ನಾವು ಬೇಡವೆಂದು ಎಲ್ಲಿ ಹೇಳಿದ್ದೇವೆ? ಅವರಿಗೂ ಮಾತನಾಡುವುದಕ್ಕೆ ಹಕ್ಕು ಇದೆ.

ಶ್ರೀ ಜಯಪ್ರಕಾಶ ಹಗಡೆ: ಪ್ರಾರಂಭಿಕವಾಗಿ ಮಾನ್ಯ ವಿರೋಧ ಪಕ್ಷದ ನಾಯಕರೇ ಮಾತನಾಡಬೇಕು.

ಶ್ರೀ ಸಿದ್ದರಾಮಯ್ಯ: ನೀವು ಹೊಸ ಸಂಪ್ರದಾಯ ಮಾಡುವುದಾದರೆ ಮಾಡಿ. ರೂಲಿಂಗ್ ಪಾರ್ಟಿಯಿಂದ ಪ್ರಾರಂಭ ಮಾಡುವುದಾದರೆ ಮಾಡಲಿ.

ಇವತ್ತು ಹೇಗಡೆ ಮಾತನಾಡುತ್ತಾರೆ? ನಾವು ಇಲ್ಲವೆಂದು ಹೇಳುತ್ತಿಲ್ಲ. ನೀವು ಹೊಸ ಸಂಪ್ರದಾಯ ಮಾಡುವುದಕ್ಕೆ ಹೋಗುತ್ತೀರಾ?

ಶ್ರೀ ಎಂ.ಪಿ.ಪ್ರಕಾಶ್: ಹಿಂದಿನ ಸಂಪ್ರದಾಯದಲ್ಲಿ ಅನೇಕ ಸಲ ಪರ್ಫಾರ್ಮೆನ್ಸ್ ಬಜೆಟ್ ಬಗ್ಗೆ ಮಾತನಾಡಿ ಆಗಿದೆ. ಎರಡು ದಿವಸಗಳಲ್ಲಿ ನಾವು ಉಳಿದ ವರದಿಗಳನ್ನು ಕೊಡುತ್ತೇವೆ.

ಶ್ರೀ ಸಿದ್ದರಾಮಯ್ಯ: ಎರಡು ದಿವಸಗಳಲ್ಲಿ ವರದಿ ಕೊಡಿ ಆಗಲೇ ಮಾತನಾಡೋಣ ಬಿಡಿ. ಇವರು ಸೋಮವಾರ ವರದಿಗಳನ್ನು ಕೊಡುವುದ ಕ್ಕಾಗುತ್ತಿಲ್ಲ ಅದ್ಯೋಸ್ಕರ ಹಾಗೆ ಹೇಳುತ್ತಿದ್ದಾರೆ.

ಅಧ್ಯಕ್ಷರು: ಎಪಿಎಂಸಿ ಗೆ ಸಂಭಂಧ ಪಟ್ಟ ಹಾಗೆ ಕೇಂದ್ರ ಸರ್ಕಾರ ದವರು ಬಹಳ ಒತ್ತಡ ಮಾಡುತ್ತಿದ್ದಾರೆ. ಅದಕ್ಕೋಸ್ಕರ ಒಂದು ಬಿಲ್ ಇದೆ. ಇದು ಬಹಳ ಇಂಪಾರ್ಟೆಂಟ್ ಎಂದು ಹೇಳುತ್ತಿದ್ದಾರೆ. ಈ ಬಿಲ್ಲನ್ನು ಮಂಡಿಸೋಣ. ಬೇಡಿಕೆಗಳ ಮೇಲಿನ ಚರ್ಚೆ ನಾಳೆಯಿಂದ ಪ್ರಾರಂಭ ಮಾಡೋಣ.

ಶ್ರೀ ಸಿದ್ದರಾಮಯ್ಯ: APMC ಬಿಲ್ ನಾಳೆ ಮಾಡಿ ಅಧ್ಯಕ್ಷರೆ.

ಅಧ್ಯಕ್ಷರು: ಈಗ ಸದನವನ್ನು ನಾಳೆ ಬೆಳಿಗ್ಗೆ 9.30. ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಸಾಯಂಕಾಲ 5.00 ಗಂಟೆ 14 ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ 13 ನೇ ಜುಲೈ 2007 ರಂದು ಬೆಳಿಗ್ಗೆ 9.30 ಗಂಟೆಗೆ ಸೇರಲು ನಿಶ್ಚಯಿಸಿತು)